ಸರಿ ಎಂದವರೇ ಪ್ರಸಾದ್ ಕಾರಿನ ಕೀ ತೆಗೆದುಕೊಂಡು ಹೊರಟರು. ಕಾರಿನ ಬಾಗಿಲು ತೆರೆಯಲು ರಿಮೋಟಿನಲ್ಲಿ ಬಟನ್ ಅದುಮಿದರು. ಬಾಗಿಲು ತೆರೆಯಲಿಲ್ಲ. ಆಗ ನೋಡಿಕೊಂಡರು, ಅವರು ತಂದದ್ದು ಗ್ಯಾರೇಜಿನಲ್ಲಿ ಇದ್ದ ಬೇರೆ ಕಾರಿನದು. ಮನೆಯೊಳಗೆ ಹೋಗಿ ಸರಿಯಾದ ಕೀ ತಂದು ಕಾರಿನ ಬಾಗಿಲು ತೆರೆದರು.

"ಏನ್ರಿ ಅಷ್ಟೂ ಗೊತ್ತಾಗಲಿಲ್ಲವಾ? ಏಕೋ ನೀವು ಸರಿಯಾದ ಮೂಡಿನಲ್ಲಿ ಇಲ್ಲ."

ಕಾರನ್ನು ಸ್ಟಾರ್ಟ್ ಮಾಡಿ ಚಲಿಸಲಾರಂಭಿಸಿದರು ಪ್ರಸಾದ್. ಮತ್ತೆ ಅದೇ ಮುಖ. ಅದೇ ನೆನಪು. ರಸ್ತೆಯಲ್ಲಿ ಅಷ್ಟಾಗಿ ವಾಹನಗಳಿರಲಿಲ್ಲ. ಸರಾಗವಾದ ಡ್ರೈವಿಂಗ್. ಒಂದೆರಡು ಕಿಲೋಮೀಟರ್ ಸಾಗಿದಮೇಲೆ ಇದ್ದಕ್ಕಿದ್ದಂತೇ ರೇವತಿ ಕಿರುಚಿದರು: "ಸ್ಟಾಪ್, ಸ್ಟಾಪ್." ಕೇಳಿದ ಪ್ರಸಾದ್ ಒಮ್ಮೆಗೇ ಬ್ರೇಕನ್ನು ಬಲವಾಗಿ ಅದುಮಿದರು. ಚೀತ್ಕಾರದೊಂದಿಗೆ ಕಾರು ನಿಂತುಕೊಂಡಿತು.

"ಆ ಮುದುಕ ರೋಡ್ ಕ್ರಾಸ್ ಮಾಡ್ತಾ ಇದಾನೆ. ನೀವು ನೋಡದೇ ಹೋಗ್ತಾ ಇದೀರಲ್ಲಾ."

"ಮುದುಕ ಎಲ್ಲೋ ಇದಾನೆ. ಸುಮ್ಮನೇ ಕಿರುಚಿಕೊಂಡಿ ನೀನು."

"ಎಲ್ಲೋ ಇರೋದಂತೆ, ನಾನು ಕೂಗದೇ ಹೋಗಿದ್ದರೆ ಅವನಿಗೆ ಹೊಡೀತಿದ್ರಿ ನೀವು. ಕಾರಿನಿಂದ ಹತ್ತು ಅಡಿ ಒಳಗೆ ಇದ್ದ ಅವನು. ಸರಿಯಾಗಿ ನೋಡಿ. ಪ್ರಸಾದ್, ಯಾಕೋ ನಿಮ್ಮ ಮೂಡ್ ಸರೀ ಇಲ್ಲ ಇವತ್ತು. ನಾನು ಡ್ರೈವ್ ಮಾಡ್ತೀನಿ, ನೀವು ಪಕ್ಕ ಕೂತ್ಕೊಳಿ. ತೂಕಡಿಕೆ ಬಂದರೆ ನಿದ್ದೆ ಮಾಡಿ."

ಮರುಮಾತಾಡದೇ ಪ್ರಸಾದ್ ಸ್ವಲ್ಪ ಮುಂದೆ ಕಾರ್ ನಿಲ್ಲಿಸಿ ಪಕ್ಕದ ಸೀಟಿನಲ್ಲಿ ಕುಳಿತರು. ಕಾರಿನ ಸಾರಥ್ಯ ರೇವತಿಯವರದಾಯಿತು.

ಮಳಿಗೆಯನ್ನು ತಲುಪಿದ್ದಾಯಿತು. ಆದರೆ ಇಂದು ಅವರಿಗೆ ಯಾವ ವಸ್ತುವನ್ನು ನೋಡುವ ಕುತೂಹಲವೂ ಇರಲಿಲ್ಲ. ರೇವತಿ ಮೈಕ್ರೋವೇವ್ ಓವನ್ನುಗಳತ್ತ ಸುಳಿದರೆ ಇವರು ಪ್ರವೇಶ ದ್ವಾರದ ಬಳಿಯೇ ನಿಂತಿದ್ದರು. "ನಿಮಗೇಕೋ ಸರಿಯಿಲ್ಲ ಇವತ್ತು. ಬೇಕಾದರೆ ಇಲ್ಲಿರೋ ಕೆಫೆಯಲ್ಲಿ ಕಾಫಿ ಕುಡೀತಾ ಇರಿ. ನಾನು ನನ್ನ ಕೆಲಸ ಆದಮೇಲೆ ಫೋನ್ ಮಾಡ್ತೀನಿ, ನಂತರ ವಾಪಸ್ ಹೋಗಬಹುದು."

ಕಾಫಿ ಕುಡಿಯುತ್ತಾ ಇದ್ದ ಪ್ರಸಾದರ ಮನಸ್ಸು ಮತ್ತೆ ಗೀತಾಳತ್ತ ಹೊರಟಿತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರಿಗೆ ಮೊದಲು ಹೊಳೆದದ್ದು – ಈಗ ಅವಳನ್ನು ಸಂಪರ್ಕಿಸಬಹುದು ಅಲ್ಲವೇ? ಫೇಸ್‌ಬುಕ್ಕಿನಲ್ಲಿ ಒಂದು ಮೆಸೇಜ್ ಕಳುಹಿಸಿದರೆ ಹೇಗಿರುತ್ತದೆ ಯೋಚಿಸಿದರು. ಅವಳು ಖಂಡಿತ ಸಂದೇಶವನ್ನು ನೋಡುತ್ತಾಳೆ. ಉತ್ತರ ಬರೆದರೂ ಬರೆಯಬಹುದು. ಹೌದು, ಇದೊಂದು ಸುವರ್ಣಾವಕಾಶ ಎನಿಸಿತು ಅವರಿಗೆ. ಮತ್ತೊಂದು ಕಾಫಿ ತರಿಸಿಕೊಂಡು, ಮೆಸೇಜಿನಲ್ಲಿ ಏನು ಬರೆಯುವುದು ಯೋಚಿಸಿದರು. 'ನಿಮ್ಮ ಫೋಟೊ ನೋಡಿ ಮತ್ತು ನೀವು ಸುಖವಾಗಿರುವುದನ್ನು ಅರಿತು ಬಹಳ ಸಂತೋಷವಾಯಿತು. ನನ್ನ ಹಿಂದಿನ ವರ್ತನೆಗೆ ಕ್ಷಮೆ ಇರಲಿ, ಸಾರಿ' ಎಂದು ಬರೆಯುವುದು ಸೂಕ್ತ ಎಂದು ನಿರ್ಧಾರವಾಯಿತು. ಕೂಡಲೇ ಅವರು ಗುಡ್ ಗೈಸ್ ಮಳಿಗೆಗೆ ಹೋಗಿ, ರೇವತಿಗೆ ಮೈಕ್ರೋವೇವ್ ಕೊಳ್ಳುವುದಕ್ಕೆ ಸಲಹೆ ಸೂಚನೆಗಳನ್ನು ಕೊಡಲಾರಂಭಿಸಿದರು. ಅಂಗಡಿಯ ಸೇಲ್ಸ್ ಗರ್ಲ್ ಅವಳಲ್ಲಿ ನಾನಾ ಪ್ರಶ್ನೆಗಳನ್ನು ಕೇಳಿದರು. ರೇವತಿ ಚುಡಾಯಿಸಿದರು – "ಏನೋ ರಾಯರು ಸರಿ ಹೋದಂತೆ ಕಾಣುತ್ತೆ. ಕಾಫಿ ಪ್ರಭಾವಾನಾ ಅದು?" ಪ್ರಸಾದ್ ಸುಮ್ಮನೇ ನಕ್ಕರು.

ಹಿಂತಿರುಗುವಾಗ ಪ್ರಸಾದ್ ಅವರೇ ಡ್ರೈವ್ ಮಾಡಿದರು. ಮನೆಗೆ ಬಂದಾಯಿತು. ಇಬ್ಬರೂ ಊಟ ಮಾಡಿದರು. ಅಭ್ಯಾಸಬಲದಂತೆ ಇಬ್ಬರೂ ನಿದ್ದೆ ಮಾಡಬೇಕು. ರೇವತಿ ನೇರ ತಮ್ಮ ಕೊಠಡಿಗೆ ಹೋದರೆ, ಪ್ರಸಾದ್ ಕಂಪ್ಯೂಟರ್ ಬಳಿ ಹೋದರು.